484 (885) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ದೇಶದವರು ಎಷ್ಟು ಮಂದಿ ಕಳೆದ ಮೂರು ವರ್ಷದಿಂದ ಅಕ್ರಮವಾಗಿ ವಾಸಿಸುತ್ತಿದ್ದಾರೆ; ಎಲ್ಲೆಲ್ಲಿ ವಾಸಿಸುತ್ತಿದ್ದಾರೆ, ದೇಶವಾರು ವಿವರ ನೀಡುವುದು;

ಆ) ಇವರುಗಳ ವೀಸಾ ಮುಗಿದಿದ್ದರೂ ಅಕ್ರಮವಾಗಿ ವಾಸಿಸುತ್ತಿರುವ ಬಗ್ಗೆ ರಾಜ್ಯ ಗುಪ್ತದಳ ಸರ್ಕಾರಕ್ಕೆ ವರದಿ ಏನಾದರೂ ನೀಡಿದೆಯೇ;

ಇ) ಹಾಗಿದ್ದಲ್ಲಿ, ಆ ವರದಿಯ ಪ್ರತಿಯನ್ನು ಒದಗಿಸುವುದು;

ಈ) ಈ ರೀತಿ ಅಕ್ರಮವಾಗಿ ನೆಲೆಸುವವರನ್ನು ಗುರುತಿಸಲಾಗಿದೆಯೇ;

ಉ) ಹಾಗಿದ್ದಲ್ಲಿ, ಇವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು);

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) :

ಅ) 34. ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಲಾಗಿದೆ.

ಆ) ಹೌದು.

ಇ) ಅನುಬಂಧ 'ಅ' ದಲ್ಲಿ ಒದಗಿಸಲಾಗಿದೆ.

ಈ) ಹೌದು.

ಉ) ವಿದೇಶಿ ಕಾಯ್ದೆಯನ್ವಯ ಕ್ರಮ ಜರುಗಿಸಲಾಗಿದೆ ಮತ್ತು ನ್ಯಾಯಾಲಯದ ಆದೇಶದಂತೆ ಕ್ರಮ ಜರುಗಿಸಿ ಮೊಕದ್ದಮೆ ಇತ್ಯರ್ಥವಾದ ನಂತರ ವಿದೇಶಿಯರನ್ನು ಗಡಿಪಾರು ಮಾಡಲಾಗುತ್ತಿದೆ. ವಿವರಗಳನ್ನು ಅನುಬಂಧ 'ಇ' ದಲ್ಲಿ ನೀಡಲಾಗಿದೆ.

ಅನುಬಂಧ – 'ಅ'

ಕ್ರ.ಸಂ	ರಾಷ್ಟ್ರೀಯತೆ	ವಿದೇಶಿಯರ ಸಂಖ್ಯೆ	ಸ್ಥಳ (ವಿಳಾಸ)
1	ಎರಿಟ್ರಿಯಾ	1	ಕೋರಮಂಗಲ, ಬೆಂಗಳೂರು

2	ಫ್ರಾನ್ಸ್	1	ಇಂದಿರಾನಗರ, ಬೆಂಗಳೂರು
3	ಯಮನ್	2	ಬಾನಸವಾಡಿ, ಬೆಂಗಳೂರು
		1	ಫ್ರೇಜರ್‌ಟೌನ್, ಬೆಂಗಳೂರು
		1	ಅಶೋಕ್‌ನಗರ, ಬೆಂಗಳೂರು
4	ಇರಾನ್	1	ಡಿ.ಜೆ.ಹಳ್ಳಿ, ಬೆಂಗಳೂರು
		2	ಬಾನಸವಾಡಿ, ಬೆಂಗಳೂರು
		1	ಮಣಿಪಾಲ್, ಉಡುಪಿ ಜಿಲ್ಲೆ
5	ಪ್ಯಾಲೆಸ್ಟೈನ್	2	ಬಾನಸವಾಡಿ, ಬೆಂಗಳೂರು
6	ಜೋರ್ಡಾನ್	1	ಬಾನಸವಾಡಿ, ಬೆಂಗಳೂರು
7	ಸೌದಿ ಅರೇಬಿಯಾ	1	ಭಾರತೀನಗರ, ಬೆಂಗಳೂರು
8	ಪಾಕಿಸ್ತಾನ್	1	ಕೆ.ಜಿ.ಹಳ್ಳಿ, ಬೆಂಗಳೂರು
		2	ಮೈಸೂರು ನಗರ
		1	ಬೀಳಗಿ, ಬಾಗಲಕೋಟೆ ಜಿಲ್ಲೆ
9	ಸೂಡಾನ್	1	ರಾಮಮೂರ್ತಿನಗರ, ಬೆಂಗಳೂರು
10	ಇಥಿಯೋಪಿಯಾ	1	ಕೋರಮಂಗಲ, ಬೆಂಗಳೂರು
11	ಕನ್ಯಾ	1	ಕೆಂಗೇರಿ, ಬೆಂಗಳೂರು
		1	ಹುಬ್ಬಳ್ಳಿ-ಧಾರವಾಡ ನಗರ
		1	ಭದ್ರಾವತಿ, ಶಿವಮೊಗ್ಗ ಜಿಲ್ಲೆ
12	ಶ್ರೀಲಂಕಾ	1	ಎಸ್.ಆರ್. ನಗರ, ಬೆಂಗಳೂರು
13	ಬಾಂಗ್ಲಾದೇಶ	1	ಸುಬ್ರಮಣ್ಯಪುರ, ಬೆಂಗಳೂರು
		1	ಕೆ.ಎಸ್.ಲೇಔಟ್, ಬೆಂಗಳೂರು

		1	ಜಯನಗರ, ಬೆಂಗಳೂರು
		1	ಮಲ್ಲೇಶ್ವರಂ, ಬೆಂಗಳೂರು
14	ನೈಜೀರಿಯಾ	1	ಹುಬ್ಬಳ್ಳಿ-ಧಾರವಾಡ ನಗರ
15	ಇಟಲಿ	1	ದಕ್ಷಿಣ ಕನ್ನಡ ಜಿಲ್ಲೆ
		1	ಗಂಗಾವತಿ, ಕೊಪ್ಪಳ ಜಿಲ್ಲೆ
16	ಸೌತ್ ಆಫ್ರಿಕಾ	1	ದಕ್ಷಿಣ ಕನ್ನಡ ಜಿಲ್ಲೆ
17	ಜರ್ಮನ್	1	ಕೊಪ್ಪಳ ಜಿಲ್ಲೆ
18	ಉಗಾಂಡ	1	ಉತ್ತರ ಕನ್ನಡ ಜಿಲ್ಲೆ
	ಒಟ್ಟು	**34**	

ಅನುಬಂಧ – ಆ

SECRET

NO.SB/01/SB/GNL/2007

office of the
State Registration Officer,
State Intelligence No.2,
Nrupathunga Road, Bangalore - 1,
Dated : 11-04-2007

To,

The Principal Secretary to Government,
Home Department,.
Government of Karnataka,
Vidhana Soudha,
BANGALORE

Sir,

Sub : Strengthening of Internal Security System.

Ref : 1. State Govt. letter No. HD/914/SST/06
Dt : 19-12-2006

2. MHA letter No. 25022/124/06-F II
dated : 31-10-2006

With referrence to the above subject, please find herein enclosures containing the information on strengthening of Internal Security System and detection,

Deportation and Illegal stay of Foreigners for the period 2001 to 2006. A floppy containing the above information is also enclosed for necessary action.

Yours faithfully,

Sd/-
For Inspector General of Police,
Intelligence.

Copy with compliments to the Director General and Inspector General of Police, Karnataka State, Bangalore for your information (No. L & O (5) MISC/126/2006 Dt : 02-01-2007).

ಅನುಬಂಧ – ಇ

ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರುಗಳ ಪಟ್ಟಿ :

ಕ್ರಸಂ.	ರಾಷ್ಟ್ರೀಯತೆ	ಹೆಸರು	ಸ್ಥಳ	ಮೊಕದ್ದಮೆ ಸಂ.14 ವಿದೇಶಿ ಕಾಯ್ದೆ 1946	ಪರಾ
1	ಎರಿಟ್ರಿಯಾ	Mr.Alamin Osman Alamin	ಬೆಂಗಳೂರು ನಗರ	773/2002	ದಿ : 26–05–2004 ರಂದು ಗಡಿಪಾರು ಮಾಡಲಾಗಿದೆ.
2	ಫ್ರಾನ್ಸ್	Mr.Rudolpy Patrick Baranowska	ಬೆಂಗಳೂರು ನಗರ	245/2002	ಅಭಿಯೋಜಕರಿಂದ ಪ್ರಕರಣವನ್ನು ಹಿಂತೆಗೆದುಕೊಳ್ಳಲಾಗಿದೆ. ಪ್ರಸ್ತುತ ವಿದೇಶಿಯರಿಗೆ ದಿ : 31–03–2008 ರವರೆಗೆ ವಾಸ ವಿಸ್ತರಣೆಯಾಗಿರುತ್ತದೆ.
3	ಯಮನ್	Mr.Ammar Yaseen Ahmed Al Azazi	ಬೆಂಗಳೂರು ನಗರ	685/2002	ದಿ : 06–04–2002 ರವರೆಗೆ ವೀಸಾ ಅವಧಿ ಇದ್ದು ನಂತರ ಇವರು ವಾಸ ವಿಸ್ತರಣೆ ಪಡೆಯದೆ ತಲೆ ಮರೆಸಿಕೊಂಡಿರುತ್ತಾರೆ. ಅವರ ಪತ್ತೆಗಾಗಿ ಲುಕ್ ಔಟ್ ಸರ್ಕುಲರ್ ಹೊರಡಿಸಲಾಗಿದೆ. ಪತ್ತೆ ಕಾರ್ಯ ಮುಂದುವರೆದಿದೆ.
4	ಯಮನ್	Mr.Thabet Shehab Derhem Ahmed	ಬೆಂಗಳೂರು ನಗರ	533/2002	ದಿ : 09–02–2002 ರಂದು ದೇಶ ಬಿಟ್ಟು ಹೋಗಿರುತ್ತಾರೆ.
5	ಯಮನ್	Mr. Ahmad Abdo Ali Alhuzzah	ಬೆಂಗಳೂರು ನಗರ	344/2003	1,000 ರೂ. ದಂಡ ವಿಧಿಸಲಾಗಿದೆ.
6	ಯಮನ್	Mr.Mohammad Abdul Quawi Saleh	ಬೆಂಗಳೂರು ನಗರ	225/2005	ಕೋರ್ಟ್ ಆದೇಶದಂತೆ ಗಡಿಪಾರು ಮಾಡಲಾಗಿದೆ.
7	ಇರಾನ್	Mr.Mohammed Farghini Dorgehani	ಬೆಂಗಳೂರು ನಗರ	256/2002	ದಿ : 18–07–2005 ರಂದು ಗಡಿಪಾರು ಮಾಡಲಾಗಿದೆ.
8	ಇರಾನ್	Mr.Arash Zarfel	ಬೆಂಗಳೂರು ನಗರ	228/2004	ದಿ : 04–09–2004 ರಂದು ದೇಶ ಬಿಟ್ಟು ಹೋಗಿರುತ್ತಾರೆ.

9	ಇರಾನ್	Mr.Mani Taghavi Nejad	ಬೆಂಗಳೂರು ನಗರ	227/2004	ದಿ : 04-09-2004 ರಂದು ದೇಶ ಬಿಟ್ಟು ಹೋಗಿರುತ್ತಾರೆ.
10	ಇರಾನ್	Mr.Ali Jamasbi	ಉಡುಪಿ	40/2007	ಇವರಿಗೆ 6 ದಿನಗಳ ಸಜೆ ಮತ್ತು 10,000 ರೂ. ದಂಡ ವಿಧಿಸಿ, ಗಡಿಪಾರು ಮಾಡುವ ಬಗ್ಗೆ ಆದೇಶಿಸಿರುತ್ತದೆ. ದಿ : 20-03-2007 ರಂದು ಗಡಿಪಾರು ಮಾಡಲಾಗಿದೆ.
11	ಪ್ಯಾಲೆಸ್ಟೈನ್	Mr.Tayser Mohammed Ahmed Khotab	ಬೆಂಗಳೂರು ನಗರ	343/2002	ದಿ : 09-12-2004 ರಂದು ದೇಶ ಬಿಟ್ಟು ಹೋಗಿರುತ್ತಾರೆ.
12	ಪ್ಯಾಲೆಸ್ಟೈನ್	Mr.Hassan Ghad ban Ahmad	ಬೆಂಗಳೂರು ನಗರ	90/2003	1,000 ರೂ. ದಂಡ ವಿಧಿಸಲಾಗಿದೆ. ವಿದೇಶಿಯರನ್ನು ಗಡಿಪಾರು ಮಾಡಲಾಗಿದೆ.
13	ಜೋರ್ಡಾನ್	Mr.Ala La Qahwash	ಬೆಂಗಳೂರು ನಗರ	474/2003	ದಿ : 12-01-2004 ರಂದು ಸಿ.ಆರ್.ಪಿ.ಸಿ. 239 ರಂತೆ ಆರೋಪಿಯು ಬಿಡುಗಡೆ ಹೊಂದಿರುತ್ತಾರೆ.
14	ಸೌದಿ ಅರೇಬಿಯಾ	Mr.Alyaa Abodulla Dbaid Jbin Ajaif Alzaabi	ಬೆಂಗಳೂರು ನಗರ	204/2004	ದಿ : 20-03-2007 ರಿಂದ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.
15	ಪಾಕಿಸ್ತಾನ್	Mr.Sumeria Mohammed Ibrahim	ಬೆಂಗಳೂರು ನಗರ	288/2004	ನ್ಯಾಯಾಲಯ ಅಂತಿಮ ತೀರ್ಪು ನೀಡಿದ್ದು ರೂ.1,000 ದಂಡ ವಿಧಿಸಿರುತ್ತದೆ. ಪ್ರಸ್ತುತ ದಿ : 26-01-2006 ರಿಂದ 28-01-2008 ರವರೆಗೆ ವಾಸವಿಸ್ತರಣಾರ್ಜಿಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
16	ಪಾಕಿಸ್ತಾನ್	Mr.Fahad@ Mohammed Koya Mr. Md. Ali Hussain	ಮೈಸೂರು ನಗರ	165/2006	ವಿದೇಶಿಯರುಗಳಿಬ್ಬರು ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಮುಂದಿನ ವಿಚಾರಣೆಯು ದಿ : 18-08-2007 ರಂದು ಇರುತ್ತದೆ.
17	ಪಾಕಿಸ್ತಾನ್	Mehaboobi + 3 Children	ಬಾಗಲಕೋಟೆ	203/1960	ವಿದೇಶಾಂಗ ವ್ಯವಹಾರಗಳ ಸಚಿವಾಲಯ ಭಾರತ ಸರ್ಕಾರದಿಂದ ಪ್ರಯಾಣ ದಾಖಲೆಗಳು ಮತ್ತು ರಹದಾರಿ ಪತ್ರ ಬಂದ ನಂತರ ಸದರಿಯವರನ್ನು ಪಾಕಿಸ್ತಾನಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು.
18	ಸೂಡಾನ್	Mr.El Hassan Mohammed Osman Kahiri	ಬೆಂಗಳೂರು ನಗರ	323/2004	ದಿ : 18-04-2007 ರಿಂದ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

19	ಇಥಿಯೋಪಿಯಾ	Mr.Ably Talahun Ashenafi	ಬೆಂಗಳೂರು ನಗರ	13/2006	ದಿ : 17-02-2006 ರಂದು ಗಡಿಪಾರು ಮಾಡಲಾಗಿದೆ.
20	ಕೆನ್ಯಾ	Mr.Cosley	ಬೆಂಗಳೂರು ನಗರ	215/2006	ಕೇಸು ವಜಾ ಆಗಿದ್ದು, ಕೋರ್ಟ್ ಆದೇಶದ ಪ್ರತಿ ನಿರೀಕ್ಷೆಯಲ್ಲಿದೆ.
21	ಕೆನ್ಯಾ	Mr.Ngoge Felix Mulando	ಹುಬ್ಬಳ್ಳಿ-ಧಾರವಾಡ	11-11-2005	ದಿ : 11-11-2005 ರವರೆಗೆ ವೀಸಾ ಅವಧಿ ಇದ್ದು, ನಂತರ ಇವರು ವಾಸವಿಸ್ತರಣೆ ಪಡೆಯದೆ ತಲೆ ಮರೆಸಿಕೊಂಡಿರುತ್ತಾರೆ. ಅವರ ಪತ್ತೆಗಾಗಿ ಲುಕ್ ಔಟ್ ಸರ್ಕುಲರ್ ಹೊರಡಿಸಲಾಗಿದೆ. ಪತ್ತೆ ಕಾರ್ಯ ಮುಂದುವರೆದಿದೆ.
22	ಕೆನ್ಯಾ	Mr.Stephen misati Ongige	ಶಿವಮೊಗ್ಗ	15/2005	ದಿ : 12-10-2004 ರಂದು ಇವರನ್ನು ಗಡಿಪಾರು ಮಾಡಲು ಆದೇಶಿಸಿದ್ದು, ಸದರಿಯವರು ತಲೆ ಮರೆಸಿಕೊಂಡಿರುತ್ತಾರೆ.
23	ಕೆನ್ಯಾ	Mr.Cosley	ಬೆಂಗಳೂರು ನಗರ	215/2006	ಕೇಸು ವಜಾ ಆಗಿದ್ದು, ಕೋರ್ಟ್ ಆದೇಶದ ಪ್ರತಿ ನಿರೀಕ್ಷೆಯಲ್ಲಿದೆ.
24	ಬಾಂಗ್ಲಾದೇಶ	Mr.Al Amran Chowdhary	ಬೆಂಗಳೂರು ನಗರ	140/2004	ದಿ : 06-06-2007 ರಿಂದ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.
25	ಬಾಂಗ್ಲಾದೇಶ	Mr. Nazmuz Zaman	ಬೆಂಗಳೂರು ನಗರ	490/2004	ಮುಂದಿನ ವಿಚಾರಣೆಯು ದಿನ : 02-09-2007 ರಂದು ಇರುತ್ತದೆ.
26	ಬಾಂಗ್ಲಾದೇಶ	Mr.Abu Taib Mohammad Yousuf	ಬೆಂಗಳೂರು ನಗರ	374/2005	ದಿ : 27-12-2005 ರಂದು ಇವರ ವಿರುದ್ಧ ವಿದೇಶಿ ಕಾಯ್ದೆಯಿನ್ವಯ ಕೇಸ್ ದಾಖಲಾಗಿದ್ದು, ಬೆಲ್‌ನ ಮೇಲೆ ಬಿಡುಗಡೆಯಾದ ನಂತರ ತಲೆ ಮರೆಸಿಕೊಂಡಿರುತ್ತಾರೆ. ಇವರ ವಿರುದ್ಧ ಲುಕ್ ಔಟ್ ಸರ್ಕುಲರ್ ಹೊರಡಿಸಲಾಗಿದೆ.
27	ಬಾಂಗ್ಲಾದೇಶ	Mr.Rasidulla Haq Imam	ಬೆಂಗಳೂರು ನಗರ	236/2005	ಮುಂದಿನ ವಿಚಾರಣೆಯು ದಿ : 06-08-2007 ರಂದು ಇರುತ್ತದೆ.
28	ನೈಜೀರಿಯಾ	Dr.James Jonathan	ಹುಬ್ಬಳ್ಳಿ-ಧಾರವಾಡ	31-10-2004	ದಿ : 31-10-2004 ರವರೆಗೆ ವೀಸಾ ಅವಧಿ ಇದ್ದು, ನಂತರ ಇವರು ವಾಸವಿಸ್ತರಣೆ ಪಡೆಯದೆ ತಲೆ ಮರೆಸಿಕೊಂಡಿರುತ್ತಾರೆ. ಅವರ ಪತ್ತೆಗಾಗಿ ಲುಕ್ ಔಟ್ ಸರ್ಕುಲರ್ ಹೊರಡಿಸಲಾಗಿದೆ. ಪತ್ತೆ ಕಾರ್ಯ ಮುಂದುವರೆದಿದೆ.
29	ಇಟಲಿ	Mr. Saliva Lawrence	ದಕ್ಷಿಣ ಕನ್ನಡ	-	ವಿದೇಶಿಯರಿಗೆ 10,000 ರೂ. ದಂಡ ವಿಧಿಸಿದ್ದು, 45 ದಿವಸಗಳ ಕಾರಾಗೃಹ ಶಿಕ್ಷೆ ನೀಡಿ ತೀರ್ಮಾನ ನೀಡಿರುತ್ತಾರೆ. ನಂತರ ನದದೆಹಲಿ ಮೂಲಕ ಸ್ವದೇಶಕ್ಕೆ ರಾಯಭಾರಿ ಕಚೇರಿಯವರು ಗಡಿಪಾರು ಮಾಡಿರುತ್ತಾರೆ.
30	ಇಟಲಿ	Mr.Trovagto	ಕೊಪ್ಪಳ	16/2004	14 ವಿದೇಶಿ ಕಾಯ್ದೆ 1946ರ ಪ್ರಕಾರ ಕ್ರಮ ಜರುಗಿಸಿದ್ದು ದಿ : 26-02-2006 ರಂದು ತಮ್ಮ ದೇಶಕ್ಕೆ ಹೋಗಿರುತ್ತಾರೆ.

31	ಆಫ್ರಿಕಾ	Mr.Tony Wilson	ದಕ್ಷಿಣ ಕನ್ನಡ	116/2007	ವಿದೇಶಿ ತಾಯ್ತನವನ್ನು ಕ್ರಮ ಅದುಗಿಸಿ ಪ್ರಸ್ತುತ ವಿದೇಶಿಯರನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿದೆ.
32	ಆರ್ಮೆನಿ	Mr.Fritz Hennun Eglly Mrs. Ostolddki	ಕೊಪ್ಪಳ	240/2006	ವಿದೇಶಯಿಂದ ತರಲ 3000 ದಂಡ ವಿಧಿಸಿದ್ದು ದೇಶ ಬಿಟ್ಟು ಹೊರಹೋಗುವಂತೆ ಆದೇಶಿಸಿರುತ್ತದೆ. ದಿ : 24-03-2007 ರಂದು ರೇಕ್ ಬಿಟ್ಟು ಹೋಗಿದ್ದಾರೆ.
33	ಅಮಾಂಡ	Mr.Dosco	ಉತ್ತರ ಕನ್ನಡ	2/2006	ಇವರಿಗೆ 5 ತಿಂಗಳ ಸಾಧಾರಣ ಶಿಕ್ಷೆ ವಿಧಿಸಿದ್ದು ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

488 (603) ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್. (ಚಿತ್ರದುರ್ಗ) :– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ನಗರಸಭೆಗೆ ಬರ ಪರಿಹಾರ ನಿಧಿಯಿಂದ ಹಣ ಬಿಡುಗಡೆಯಾಗಿದ್ದು, ಟಾಸ್ಕ್ ಫೋರ್ಸ್ ಸಮಿತಿಯ ಅನುಮೋದನೆ ಪಡೆಯದೇ ಕಾರ್ಯ ಪ್ರಾರಂಭಿಸಿರುವುದು ಸರಿಯೇ;

ಆ) ಚಿತ್ರದುರ್ಗ ನಗರಸಭೆಯ ಟಾಸ್ಕ್ ಫೋರ್ಸ್ (ಅಭಿವೃದ್ಧಿ) ಸಮಿತಿಯ ಅನುಮೋದನೆ ಪಡೆಯದೆ, ಕೆಲಸ ಪ್ರಾರಂಭಿಸಿರುವುದು ಟಾಸ್ಕ್ ಫೋರ್ಸ್ ಸಮಿತಿಯ ಅಧಿಕಾರಕ್ಕೆ ಚ್ಯುತಿ ಬರುವುದಿಲ್ಲವೆ;

ಇ) ಈ ಸಮಿತಿಯಲ್ಲಿ ಯಾವ ಯಾವ ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ? (ಇದರ ಬಗ್ಗೆ ಪೂರ್ಣ ವಿವರ ನೀಡುವುದು)

ಶ್ರೀ ಆಲಂಗೂರು ಶ್ರೀನಿವಾಸ (ಪೌರಾಡಳಿತ ಸಚಿವರು) :

ಅ) ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಬಿಡುಗಡೆಯಾದಂತಹ ಅನುದಾನವನ್ನು ತುರ್ತು ಸಂದರ್ಭಗಳಲ್ಲಿ ವಿನಿಯೋಗಿಸಲು ಅವಕಾಶವಿರುವುದರಿಂದ ಟಾಸ್ಕ್‌ಫೋರ್ಸ್ ಸಮಿತಿಯ ಘಟನೋತ್ತರ ಅನುಮೋದನೆ ಪಡೆಯುವ ನಿರೀಕ್ಷೆ ಮೇರೆಗೆ ರೂ.10,42,340–00 ಗಳನ್ನು ಕುಡಿಯುವ ನೀರಿಗಾಗಿ ವಿನಿಯೋಗಿಸಲಾಗಿದೆ.

ಆ) ತುರ್ತು ಪರಿಸ್ಥಿತಿಯಲ್ಲಿ ಸಮಿತಿಯ ಘಟನೋತ್ತರ ಅನುಮೋದನೆ ಪಡೆಯುವ ನಿರೀಕ್ಷೆಯ ಮೇರೆಗೆ ಕೆಲಸ ಮಾಡಿದ್ದರಿಂದ ಟಾಸ್ಕ್‌ಫೋರ್ಸ್ ಸಮಿತಿಯ ಅಧಿಕಾರಕ್ಕೆ ಚ್ಯುತಿ ಉಂಟಾಗಿರುವುದಿಲ್ಲ.

ಇ) ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಪ್ರಕೃತಿ ವಿಕೋಪ ಸಮಿತಿಯನ್ನು ರಚಿಸಿದ್ದು, 1) ಸದರಿ ಸಮಿತಿಯು ಪ್ರಕೃತಿ ವಿಕೋಪ ಪರಿಹಾರ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸುವುದು, 2) ಗಂಜಿ ಕೇಂದ್ರ, 3) ಗೋಶಾಲೆ ತೆರೆಯಲು ಜಿಲ್ಲಾ ಮಟ್ಟದ ಸಮಿತಿ ಶಿಫಾರಸ್ಸು ಮಾಡುವ ಅಧಿಕಾರವನ್ನು